**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

ಓ ಎಸ್ ನಂ. **24/2015**

ಡಿ ಡಬ್ಲ್ಯೂ: 4

ದಿನಾಂಕ 28/03/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು

ಮುಖ್ಯ ವಿಚಾರಣೆ: **5** ಮತ್ತು **6** ನೇ ಪ್ರತಿವಾದಿ ಪರ: ಶ್ರೀ ಬಿ ಆರ್ ಹೆಚ್ ವಕೀಲರಿಂದ:

ನಾನು ದಾವೆಯಲ್ಲಿ ಆರನೇ ಪ್ರತಿವಾದಿ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಪಾಟೀ ಸವಾಲು: 2 ಮತ್ತು 3 ನೇ ವಾದಿಗಳ ಪರ: ಶ್ರೀ ಪಿ ಆರ್ ಸಿ ವಕೀಲರಿಂದ:

ನಾನು ಮತ್ತು 5 ನೇ ಪ್ರತಿವಾದಿ ಒಟ್ಟಿಗೆ ಸೇರಿ ಕಡೂರಿನ ಟಿ ಬಿ ರಸ್ತೆಯಲ್ಲಿ 75 x 45 ಅಡಿ ವಿಸ್ತೀರ್ಣದ ನಿವೇಶನವನ್ನು ಖರೀದಿಸಿರುತ್ತೇವೆ ಎಂದರೆ ಸರಿ. ಸದರಿ ಸ್ವತ್ತನ್ನು ಚಂದ್ರಪ್ಪ ಎನ್ನುವವರಿಂದ ಮಾತ್ರ ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾವು ಖರೀದಿಸಿರುವ ಸ್ವತ್ತನ್ನು ಕೃಷ್ಣಪ್ಪರವರ ಮೊದಲನೇ ಹೆಂಡತಿ ಹನುಮಮ್ಮರವರ ಮಗನಾದ ಚಂದ್ರಪ್ಪರವರಿಂದ ಮಾತ್ರ ಖರೀದಿಸಿರುತ್ತೇನೆ ಎಂದರೆ ಸಾಕ್ಷಿ ಹೌದು

ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಚಂದ್ರಪ್ಪ ಮತ್ತು ಅವರ ಹೆಂಡತಿ ಮಕ್ಕಳಿಂದ ಸದರಿ ಸ್ವತ್ತನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಕೃಷ್ಣಪ್ಪರವರ ಎರಡನೇ ಹೆಂಡತಿಯಾದ ಲಕ್ಷ್ಮಮ್ಮ ಮತ್ತು ಅವರ ಮಕ್ಕಳ ಸಹಿಯನ್ನು ಪಡೆದಿಲ್ಲ ಎಂದರೆ ಸಾಕ್ಷಿ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಖರೀದಿಸಿರುವ ಸ್ವತ್ತು ಕೃಷ್ಣಪ್ಪರವರ ತಂದೆ ದಾಸಪ್ಪರವರ ಸ್ವತ್ತಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಸ್ವತ್ತು ಕೃಷ್ಣಪ್ಪರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಚಂದ್ರಪ್ಪ ಮತ್ತು ಅವರ ಕುಟುಂಬದ ನಡುವೆ ಜುಬಾನೆ ಪಾಲು ವಿಭಾಗ ಆಗಿದೆ ಎಂದು ತಿಳಿಸಿದ್ದು ಆ ಬಗ್ಗೆ ದಾಖಲೆಗಳನ್ನು ಒದಗಿಸಿರುತ್ತೇನಾ ಎಂದರೆ ಸಾಕ್ಷಿ ನನಗೆ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕೃಷ್ಣಪ್ಪರವರ ಎರಡನೇ ಹೆಂಡತಿ ಲಕ್ಕಮ್ಮ ಮತ್ತು ಅವರ ಮಕ್ಕಳ ಸಹಿ ಪಡೆಯದೇ ಮೇಲ್ಕಂಡ ಸ್ವತ್ತನ್ನು ಖರೀದಿಸಿರುವುದರಿಂದ ಅದು ಅಸಿಂಧುವಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.